

**◆ ‘ಮನುಜ’ ಎನ್ನುವ ನಿಮ್ಮ ಕಾವ್ಯನಾಮಕ್ಕಿಂತ ನಿಮ್ಮ ಹೆಸರೇ ಹೆಚ್ಚು ಜನಪ್ರಿಯ. ಕಾವ್ಯನಾಮದ ಔಚಿತ್ಯ ಏನಿತ್ತು?**

ಕಾವ್ಯನಾಮ ಎನ್ನುವುದಕ್ಕಿಂತ ಅದನ್ನು ‘ಗುಪ್ತನಾಮ’ ಎಂದು ಇಟ್ಟುಕೊಳ್ಳಬಹುದು. ನಮ್ಮ ತಂದೆಗೆ ಸಾಹಿತ್ಯದಿಂದ ಹೊಟ್ಟೆ ತುಂಬುವುದಿಲ್ಲ ಎನ್ನುವ ಮನೋಭಾವ. ಸಾಹಿತ್ಯ ಏನಿದ್ದರೂ ಅಲಂಕಾರಕ್ಕಷ್ಟೇ. ತಾವೊಬ್ಬರೇ ಬಡತನದಲ್ಲಿ ಬದುಕಿದ್ದು ಸಾಕು. ಮಗ ವಿಜ್ಞಾನಿ ಆಗಬೇಕು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸೇರಬೇಕು ಎನ್ನುವ ಆಸೆ ಅವರದಾಗಿತ್ತು. ಅದೇ ಕಾರಣಕ್ಕೆ ಬಿ.ಎಸ್ಸಿ. ಓದಿಸಿದ್ದರು. ನನಗೆ ಸಾಹಿತ್ಯದ ಗೀಳು. ನಮ್ಮೂರ ರಂಗನಾಥನ ತೇರು ಮತ್ತು ಮಾರಮ್ಮನ ಜಾತ್ರೆ ಸಂದರ್ಭದಲ್ಲಿ ಜಾನಪದರ ಹಾಡು ಕೇಳುವ, ಜೊತೆಗೊಳ್ಳುವ ಉತ್ಸಾಹ ಇತ್ತು. ನಮ್ಮ ತಂದೆಗೆ ಅದೆಲ್ಲ ಇಷ್ಟ ಇರಲಿಲ್ಲ. ಅದಕ್ಕೆ ನಾನು ಗುಪ್ತನಾಮ ಇಟ್ಟುಕೊಂಡೆ. ‘ಮನುಜ’ ಎಂದರೆ ಜಾತಿ, ಪಂಥ, ಧರ್ಮ ಇಲ್ಲದ ಮನುಷ್ಯ. ಕುವೆಂಪು ಪ್ರತಿಪಾದಿಸಿದ ವಿಶ್ವಮಾನವ ಪರಿಕಲ್ಪನೆಯಲ್ಲಿ ಜಾತ್ಯತೀತ ವ್ಯಕ್ತಿ ಎಂದು ಅರ್ಥ. ‘ಮನುಜ ಮಧುಗಿರಿ’ ಎಂದು ಪದ್ಯ ಬರೆಯಲು ಆರಂಭಿಸಿದೆ. ನನ್ನ ಅಪ್ಪ ‘ಮನುಜ ಮಧುಗಿರಿ ಎಂದು ಒಬ್ಬ ಬರೀತಿದ್ದಾನೆ. ನಿನಗೆ ಗೊತ್ತೇನೋ ಅವನು’ ಎಂದು ಊಟ ಮಾಡುತ್ತಿದ್ದಾಗ ಒಮ್ಮೆ ಕೇಳಿದ್ದರು. ‘ಗೊತ್ತಿಲ್ಲಪ್ಪ’ ಎಂದು ಹೇಳಿದ್ದೆ. 8 ವರ್ಷ ಹಾಗೆಯೇ ಬರೆದೆ. ‘ಪ್ರಜಾವಾಣಿ’ಯ ವೈಕುಂಠರಾಜು, ‘ಮನುಜ ಅಂದ್ರೆ ಯಾರಿಗೆ ಗೊತ್ತಾಗುತ್ತದೆ. ದೊಡ್ಡರಂಗೇಗೌಡ ಎಂದೇ ಇರಲಿ’ ಎಂದು ಹಾಗೆಯೇ ಪ್ರಕಟಿಸಿದರು. ಅದರಿಂದ ನನ್ನ ಹೆಸರು ಜನಪ್ರಿಯ ಆಯಿತು.

**◆ ನಿಮ್ಮ ಕುಟುಂಬ ‘ಸಾಹಿತ್ಯ ಅಧ್ಯಾಪಕರ ಗಣ’ ಇದ್ದಂತಿದೆ. ಇದೇನು ಕಾಕತಾಳೀಯವೋ ಹೇಗೆ?**

ನಮ್ಮ ತಂದೆ, ಚಿಕ್ಕಪ್ಪ, ಮಾವ ಕನ್ನಡ ಮೇಷ್ಟ್ರು. ನಮ್ಮ ಮನೆಯ ಎಲ್ಲರೂ ಕನ್ನಡ ಮೇಷ್ಟ್ರು. ಇದೊಂದು ಸೋಜಿಗ. ನನ್ನ ಹೆಂಡತಿ ರಾಜೇಶ್ವರಿ ಗೌಡ ಕನ್ನಡ ಅಭಿಮಾನಿ. ನಾವಿಬ್ಬರು ಪ್ರೀತಿಸಿ ಮದುವೆ ಆದವರು. ನಮ್ಮದು ಅಂತರ್ಜಾತಿ ವಿವಾಹ ಆಗಿದ್ದರಿಂದ ಎರಡೂ ಕುಟುಂಬದಿಂದ ದೂರವಾದೆವು. ಕೇವಲ ನೂರು ರೂಪಾಯಿಯಲ್ಲಿ ನಮ್ಮ ಮದುವೆ ಮುಗಿದಿತ್ತು. ಆರ್ಯ ಸಮಾಜದಲ್ಲಿ ಸಹಜೀವನದ ಪ್ರಮಾಣ ಸ್ವೀಕರಿಸಿದ್ದೆವು. ಆ ಸಂದರ್ಭದಲ್ಲಿ ಲಂಕೇಶ್, ‘ಚೆನ್ನಾಗಿ ಬರಿಯೋ’ ಎಂದು ಹರಸಿ ಒಳ್ಳೆಯ ಪೆನ್ ಕೊಟ್ಟಿದ್ದರು.

ನನ್ನ ಪತ್ನಿ ಈಗಿಲ್ಲ. ಅವರೂ ಕನ್ನಡ ಪ್ರಾಧ್ಯಾಪಕಿ. 14 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ನನ್ನ ಪ್ರವಾಸ, ಅಧ್ಯಯನ, ಬರವಣಿಗೆಗೆ ಜೊತೆಯಾಗಿದ್ದರು. ಮಗ ಡಿ. ಭರತ್, ಆತ ಕೂಡ ಕನ್ನಡ ಅಧ್ಯಾಪಕ. ‘ಕನ್ನಡ ಚಲನಚಿತ್ರ 80 ವರ್ಷ’ ಎಂಬ ವಿಷಯದಲ್ಲಿ ಸಂಶೋಧನೆ ಮಾಡಿದ್ದಾನೆ. ಮಗಳು ಡಿ. ಸ್ಮಿತಾ. ‘ಪ್ರಗಾಥ’ ಕಾವ್ಯ ಪ್ರಕಾರದ ಮೇಲೆ ಪಿಎಚ್.ಡಿ. ಮಾಡುತ್ತಿದ್ದಾಳೆ. ಹಿರಿಸಾವೆ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕಿ. ಇದೇ ಕಾರಣಕ್ಕೆ ‘ಫ್ಯಾಮಿಲಿ ಡಾಕ್ಟರ್ ಇರುವಂತೆ ದೊಡ್ಡರಂಗೇಗೌಡರ ಮನೆಯಲ್ಲಿ ಫ್ಯಾಮಿಲಿ ಟೀಚರ್ಸ್ ಇದ್ದಾರೆ’ ಎಂದು ಹಂಪನಾ ಹೇಳುತ್ತಾರೆ. ಮನೆಯಲ್ಲಿ ಸಾಹಿತ್ಯ ವಾತಾವರಣ ಇತ್ತು. ಸಾಹಿತಿಗಳು–ಸಂಗೀತಗಾರರು ಭೇಟಿ ನೀಡುತ್ತಿದ್ದರು. ಅದು ಪರೋಕ್ಷವಾಗಿ ಪ್ರಭಾವ ಬೀರಿದ್ದರಿಂದ ಮಕ್ಕಳೂ ಕನ್ನಡ ಅಧ್ಯಾಪಕರಾದರು ಎಂದೆನಿಸುತ್ತದೆ.

**◆ ಪದ್ಯಗಳ ಪ್ರಮಾಣಕ್ಕೆ ಹೋಲಿಸಿದರೆ, ನಿಮ್ಮ ಕಥನ ಸಾಹಿತ್ಯ ಕಡಿಮೆ ಆಯಿತು ಎಂದು ನಿಮಗೆ ಅನ್ನಿಸಿದೆಯೇ?**

ಹಾಗೇನೂ ಇಲ್ಲ. 47 ನೀಳ್ಗವಿತೆಗಳನ್ನು ಬರೆದಿದ್ದೇನೆ. 80 ಕಥೆಗಳನ್ನು ಬರೆದಿದ್ದೇನೆ. ಪ್ರವಾಸ–ಸಂಶೋಧನೆಯ ಗದ್ಯ ಬರಹಗಳೂ ಇವೆ. ಇತ್ತೀಚೆಗೆ ‘ಮಧ್ಯವರ್ತಿ ಮತ್ತು ಇತರ ಕಥೆಗಳು’ ಎಂಬ ಸಂಕಲನ ಬಂದಿದೆ. ಅದು ಇಂಗ್ಲಿಷ್‌ಗೂ ಭಾಷಾಂತರ ಆಗಿದೆ. ಕೊರೊನಾ ಸಮಯದಲ್ಲೇ 47 ಕಥೆಗಳನ್ನು ಬರೆದಿದ್ದೇನೆ. ಮೊದಲು ಕಥೆಗಳನ್ನೇ ಬರೀತಾ ಇದ್ದೆ. ರೈಲ್ವೆ ಇಲಾಖೆಯ ಅನುಭವಗಳನ್ನು ಕಥೆಗಳ ಮೂಲಕವೇ ಕಟ್ಟಿಕೊಟ್ಟಿದ್ದೇನೆ.

**◆ ಅಮೆರಿಕ ಮತ್ತು ಈಜಿಪ್ಟ್ ಸೇರಿದಂತೆ ಹಲವು ದೇಶಗಳ ಪ್ರವಾಸ ಮಾಡಿದ್ದೀರಿ. ಅಲ್ಲಿನ ಸಾಹಿತ್ಯಿಕ ವಾತಾವರಣ ನಿಮ್ಮನ್ನು ಪ್ರಭಾವಿಸಿದೆಯೆ?**

ಬರವಣಿಗೆಗಿಂತ ಸಾಂಸ್ಕೃತಿಕವಾಗಿ ಪ್ರಭಾವ ಬೀರಿದೆ. ಅಮೆರಿಕಕ್ಕೆ 7 ಬಾರಿ ಹೋಗಿದ್ದೇನೆ. ಅಲ್ಲಿ ಸ್ವಚ್ಛತೆ, ಅಚ್ಚುಕಟ್ಟುತನಕ್ಕೆ ಆದ್ಯತೆ ಹೆಚ್ಚು. ಎಲ್ಲಿಂದ ಎಲ್ಲಿಗೇ ಹೋದರು ಅಷ್ಟಪಥ ರಸ್ತೆ. ವಿಜ್ಞಾನದ ಜೊತೆ ಪವಾಡವನ್ನೇ ಅವರು ಮಾಡಿದ್ದಾರೆ. ಇಂತಹದ್ದು ಸಾಧ್ಯ ಇಲ್ಲ ಎನ್ನುವಂತಿಲ್ಲ. ಈ ವಿಷಯವನ್ನು ನಾನು ಕಂಡ ಬೇರೆ ದೇಶಗಳಿಗೆ ಹೇಳುವಂತಿಲ್ಲ. ನಾನು ನೋಡಿದ ಕಠ್ಮಂಡು, ಆಫ್ರಿಕಾದಂಥ ಕೆಲ ದೇಶಗಳಲ್ಲಿ ಅಷ್ಟು ಸ್ವಚ್ಛತೆ ಇಲ್ಲ.

ನಾನು ಮೊದಲ ಪಿಯು ಇದ್ದಾಗ ಗೋವಿಂದ ಪೈ ಅವರ ಲೇಖನ ಒಂದನ್ನು ಓದಿದ್ದೆ. ಗ್ರೀಕ್‌ನಲ್ಲಿ ಕನ್ನಡದ ಆರು ಪದಗಳಿವೆ ಎಂದವರು ಬರೆದಿದ್ದರು. ಆ ಪ್ರಾಂತ್ಯದಲ್ಲಿ ಕನ್ನಡ ಅಸ್ತಿತ್ವದಲ್ಲಿ ಇದ್ದಿರಬಹುದು, ಅದನ್ನು ನೋಡಬೇಕು ಎನ್ನುವ ಸಂಕಲ್ಪವನ್ನು ಅಂದೇ ಮಾಡಿದ್ದೆ. ಅದಾಗಿ 40 ವರ್ಷದ ನಂತರ ಪತ್ನಿ ಜೊತೆ ಈಜಿಪ್ಟ್‌ಗೆ ಹೋದೆ. ಅಲ್ಲಿ ಸಿಕ್ಕಾಪಟ್ಟೆ ಬಿಸಿಲಿನಲ್ಲಿ ಬೆಂದುಹೋದೆವು. ದಾಹ ತಣಿಸಲು ನೀರಿಗಾಗಿಯೇ ಹೆಚ್ಚು ಹಣ ಖರ್ಚು ಮಾಡಿದ್ದೇವೆ. ಮಾಂಸಾಹಾರ ಸೇವಿಸಿ ಅಭ್ಯಾಸ ಇಲ್ಲದ್ದರಿಂದ ಹಣ್ಣು, ಬನ್‌ನಲ್ಲೇ ಕಾಲ ಕಳೆದವು. 11ನೇ ದಿನ ‘ರಾಹೋಟೋಪ್’ಗೆ ಭೇಟಿ ನೀಡಿದೆವು. ಅದು ನಮ್ಮ ಹಂಪಿಯಂತೆಯೇ ಇತ್ತು. ಅದನ್ನು ನೋಡಿ ತುಂಬ ಆನಂದವಾಯಿತು. ಅಲ್ಲಿನ ಗೋಡೆಯ ಮೇಲೆ ‘ಊರೊಳ್’ ಎಂಬ ಅಚ್ಚಕನ್ನಡ ಪದವನ್ನು ಕಂಡೆವು. ನಮಗೆ ಮಾರ್ಗದರ್ಶಿಯಾಗಿದ್ದ ಸ್ಥಳೀಯ ಸಂಶೋಧಕಿ ನೇಹಾ ಅಲ್ಲಿನ ವಸ್ತುಸಂಗ್ರಹಾಲಯ,